|| ಶ್ರೀ ಗಣೇಶಾಯನಮಃ ||

ಹರಿಃ || ಓಂ ||

# ಶಂಕರ ಗಂಡನ ಹಾಡು

ಗಿರಿಜೆಯ ವರಸುತಗೆರಗಿ ಬಿನ್ನೈಸುವೆ, ಸರಸ್ವತಿಗೆ ಅಭಿವಂದಿಸುವೆ।
ಪರಮದಯಾಳು ಹೆಳವನಕಟ್ಟೆ ರಂಗಯ್ಯ ಒಡೆಯನು ಯನಮಾನದೊಡೆಯ ||
1 || ತಾನಾಲಿಸುತ ಶಂಕರಗಂಡ ತಂಗಿಗೆ ವಿವಾಹ ಮಾಡೊಸಂಭ್ರಮದಿ ।
ಭಾವಮೈದುನರಾದ ಕಥೆಯನೆ ಪೇಳುರೆ ನೀವೆಲ್ಲ ಕೇಳಿ ಸಜ್ಜನರು || 2 ||
ದ್ವಾರಾವತಿಯ ಸೀಮೆಯಲ್ಲಿ ರಂಜಿಸುವ ವಿಶಾಲ “ವಿಲಾಸ” ಪಟ್ಟಣದಿ

ನಾರಾಯಣನಕುಮಾರ ಒಪ್ಪಿದನೊಂದು ಚಾರುಮಣಿ ಖಚಿತ ಮಂದಿರದಿ ॥ 3 ॥ ಚಂದ್ರಸೂರ್ಯರು ಎಡಬಲದಿ ಒಪ್ಪಿರಲು ಮಂದಮಾರುತ ತಂಪೆಸೆಯ । ಗಂಧಕಸ್ತೂರಿ ಕದಂಬವನೇರಿಸಿ ಆನಂದವಾಗಿದ್ದ ಮನ್ಮಥನು ॥ 4 ॥ ಕೈಲಾಸಪುರದ ರಾಜ್ಯದೊಳಗೊಪ್ಪುವ ನಿರ್ಭಯದಲಿ ''ನಲ್ಕಾವತಿಯು''। ತ್ರೈಲೋಕ್ಯವಂದ್ಯ ಶಂಕರಗಂಡನಿಹ ಒಮ್ಮನದಿಂದ್ದನು ಜಯಪಾಲಿಸುತ್ತ ॥5॥ ಅರಗಿಳಿ ಯಾಡಿಸುವೊಳು ಕೆಂದುಳಿಯನು ಮರಿಹಾವುಗಳನೆರಹುವಳು । ತರಳಾಕ್ಷಿ ತನ್ನ ಸಂಪತ್ತುಗಳೆಲ್ಲವ ಬಿಟ್ಟು ಗೊಂಬೆಯಾಟವನೆ ಆಡುವಳು ॥ 6 ॥ ಆಡೋಳು ಪಂಚಪಗಡಿ ಚಿನ್ನದಮಣೆಯೊಳು ಕೂಡಿದ್ದ ಗೆಳತಿಯರ ಒಡನೆ । ಪಾಡೋಳು ಮರಿಕೋಗಿಲೆಯಂತೆ ತಂಗಿಯ ನೋಡಿದ ನವಯೌನವನು ॥ 7 ॥ ನಿತ್ಯನಿತ್ಯದಿ ಯೌವನವು ಹೆಗ್ಗಳಿಸಲು ಬಟ್ಟುಕುಚವು ತೋರಿದವು । ಮಿತ್ರೆ ತಂಗಿಗೆ ವರದಾವುದೆನುತಲಿ ಚಿತ್ತದೊಳಗೆ ಚಿಂತಿಸುತಿದ್ದ ॥ 8 ॥ ಪುಷ್ಪಬಾಣನು ತಂಗಿಗೆ ತಕ್ಕವರನೆಂದು ಚದುರಚೆನ್ನಿಗನು ಮನ್ಮಥನು । ತವಕದಿ ಬುದ್ಧಿವಂತರ ಕಳುಹಿಸಿನಾಳೆ ಉದಯಕ್ಕೆ ಕರತನ್ನಿರೆಂದು ॥ 9 ॥ ಬಂದು ವಿಲಾಸ ಪಟ್ಟಣ ದೊಳು ಮದನಗೆ ಪ್ರೀತಿಲಿ ನಿಂದು ಕೈಮುಗಿದು। ಹೋಗೆಂದು ಶಂಕರಗಂಡ ಕಳುಹಿದ ನಿಮ್ಮಾನಿಗ್ಗೈತಂದೆವೆನಲು ॥ 10 ॥ ಬಂದ ಬಿಡಾರವ ತಂಡ ತಂಡದಲಿಳಿಸಿ ವಂದಿಸಿ ಮಾತಾಡಿ ನಗುತ । ಭೂಮಂಡಲದೊಳು ಕ್ಷೇಮವೆನುತ ಶಂಕರಗಂಡ ಕೇಳಿದ ಮನ್ಮಥನ ॥ 11 ॥ ನಿಮ್ಮ ಕಾರುಣ್ಯ ಕೃಪೆಯಿಂದ ಸ್ತೋತ್ರವು ನಮ್ಮ ರಾಜ್ಯವು ಕ್ಷೇಮವೆನಲು । ಸನ್ಮಾನದಿಂದ ಉಪಚಾರ ನೋಡುತ ಬ್ರಹ್ಮಾನಂದದಲಿದ್ದ ಶಂಕರನು ॥ 12 ॥ ರುಕ್ಮಿಣಿತನುಜಾಗೆ ಯಮ್ಮನೂಜೆಯ ಕೊಟ್ಟು ವಿವಾಹ ಮಾಡಲಿಚ್ಚಿಸುವೆ। ಲಕ್ಷಣವಂತಿಯ ಕೈಪಿಡಿ ನಿಮ್ಮನಪೇಕ್ಷಿಸಿದಳು ಚಂದ್ರಮುಖಿಯ ॥ 13 ॥ ತಂದು ಗದುಗೆಯ ಚಾವಡಿಯಲ್ಲಿ ಹಾಕೋರು ಸಂಭ್ರಮದಿಂದ ಕುಳಿತರು । ಹೊಂಬಣ್ಣದ್ದರಿವಾಣದೊಳಗೆ ತಾಂಬೂಲವ ತಂದಿಡುವರು ಮನ್ಮಥಗೆ ॥ 14 ॥

ಅಂಗಜ ಅತಿ ದೈನ್ಯ ಉಕ್ತಿಯಿಂದಲಿ ಬಹುಮಂಗಳ ಮೃದುವಾಕ್ಯವನ್ನು । ಪ್ರಸಂಗಮಾಡುವನು ಶಂಕರಗಂಡ ನಿಮ್ಮಯ ತಂಗಿಯನನಗಿಹೋದೆಂದ

॥15॥ಸರ್ವಲಕ್ಷಣವುಳ್ಳ ಸರಸಿಜನೇತ್ರಿಯ ಒಬ್ಬಳೇ ರತಿ ನಮ್ಮ ತಂಗಿ । ಹಬ್ಬ ಹುಣ್ಣಿಮೆಗೆ ಕಳಿಸದೆ ನಮ್ಮನಿಗೆ ನಿರ್ಬಂಧ ಮಾಡುವಿರೆಂದು ॥ 16 ॥ ನಡೆದರೆ ಬಡವಾಹಳು ನಮ್ಮ ತಂಗಿಯ ಕಡುಮೋಹದಿಂದ ಸಾಕಿದೆನು। ಬಡಿವಾರ ನಿಮ್ಮೊಳು ಭರವಸೆ ನಮಗೇನು ಕೊಡಲಾರೆ ತಂಗಿಯನೆಂದ ॥17॥ ಅನುಮಾನ ಮಾಡುವುದೇಕೋ ನೀ ಇಷ್ಟೊಂದು ಎನಗೆ ಸ್ವಾತಂತ್ರವೆಲ್ಲಿಹುದು। ನೆನೆದಾಗ ಕಳುಹುವೆ ನಿನ್ನ ಮನೀಗೆಂದು ಮನಸಿಜನುಡಿದ ದೈನ್ಯದಲ್ಲಿ ॥ 18 ॥ ಹಾಗಾದರಾಗಲಿ ಎನುತ ರಾಶೀ ಕೂಟ ಬ್ಯಾಗದಿಂದಲಿ ನೋಡಿದರು । ಭಾಗೀರಥಿಗೆ, ಮದನರತಿದೇವಿಗೆ, ಆಗಲೇ ನೇಮವನೆ ಮಾಡಿದರು ॥ 19 ॥ "ನಲ್ಕಾವತಿಯ" ಶೃಂಗಾರ ಮಾಡಿದರು ದಿನಕರ ಪ್ರತಿಬಿಂಬದಿಂದಲಿ। ಕನಕ ತೋರಣಗಳ ಕಟ್ಟಿ ತಾ ಕರೆಸಿದ ಎಣಿಕೆ ಇಲ್ಲದ ಬಂಧು ಜನರ ॥ 20 ॥ ಬಲ್ಲಿದ ಶುಭಲಗ್ನವನೋಡಿ ಬಂಧುಜನರು ಎಲ್ಲಾರು ನೆರೆದು ಸಂಭ್ರಮದಿ । ಮಲ್ಲಿಗೆ ಸರದಿ ಮದನರತಿ ದೇವಿಗೆ ಕಲ್ಯಾಣವನೆ ಮಾಡಿದರು ॥ 21 ॥ ಶೆಳಿಮಂಚ ಸುಪ್ಪತ್ತಿಗೆ ಸುವರ್ಣದ ತಳಿಗೆ ಬಟ್ಟಲು ಗಿಂಡಿಗಳನು । ಬಳುವಳಿ ಮಾಡಿದ ಸ್ತುತಿಸುವ್ರೊ ಕೆಳದೇರ ಬಳುವಳಿ ತಂಗಿಗೆ ಇತ್ತ ॥ 22 ॥ ಸಾಸಿರಗೋವ್ರು ಗಜವು ತುರುಗವು ಬ್ಯಾಸರದೆ ತಂಗಿಗಿತ್ತ। ಲೇಸಾದ ಊರು ಉಂಬಳಿಗಳ ಕೊಟ್ಟು ವಿಲಾಸ ಪಟ್ಟಣಕೆ ಕಳುಹಿದರು ॥ 23 ॥ಮನ್ಮಥರತಿದೇವಿ ವಿಲಾಸಪಟ್ಟಣದೊಳು ಉನ್ನಂತ ದಿನ ಬಾಳುತಿರಲು। ಇನ್ನೊಮ್ಮೆ ನೋಡಬೇಕೆನುತ ಶಂಕರಗಂಡ ತನ್ನೊಳುತಾನೆ ಯೋಚಿಸಿದ ॥ 24॥ ಬಿಗಿದು ಸುತ್ತಿದ ದೊಡ್ಡ ಚೆಂಡಿಯ ಬೆನ್ನಿಗೆ ಬಿಗಿದ ನಾಡಗಂಬಳಿಯ । ಹೆಗಲಮೇಲಿನ ಬಾರುಕೋಲು ಮನ್ಮಥರಾಯ ನಗುವಂತೆ ಮಾಡಿರೂಪವನು ॥ 25 ॥ ಹೆಗ್ಗಾಲುಮರಿಯ ತೊಟ್ಟಿದ್ದ ಕೈಯಲ್ಲಿ ದೊಡ್ಡಕುಡಗೋಲುಕವಣಿಯ ಪಿಡಿದು । ಶೀಘ್ರದಿ ತೆರಳಿ ಅಂಗಜನಹಂಕಾರವ ನಿಗ್ರಹ ಮಾಡುವೆನೆನುತ ॥26॥ ನೋಡೆಲೆರತಿ ನಿನ್ನಒಡಹುಟ್ಟಿದಣ್ಣನು ರೂಢಿಯೊಳಗೆ ಅತಿಚೆಲುವ। ಗಂಡು ಕೆರವ ಮೆಟ್ಟಿ ಗಮಕದಿಬರುವ್ರೋನು ನೋಡೆಂದುಸತಿಗೆ ತೋರಿಸಿದ॥ 27 ॥

ಬಡವನಲ್ಲವೊ ಆತ ಬಹುಪರಾಕ್ರಮಿ ಒಡಹುಟ್ಟಿದಣ್ಣ ತಾಮುನಿಯೆ। ಕೆಡವೊದು ನಿಮ್ಮ ಐಶ್ವರ್ಯವು ಆತನಗೊಡವೆ ನಮಗೆ ಬೇಡವೆಂದ್ನು || 28 || ಕಾಂತೆಯಮಾತನು ಕೇಳಿ ಅಂಗಜನು ದಾವಕಾರಣವು ಹೇಳದಂತೆ । ದಿವಕರನಂತೆ ಹೊಳೆಯುತ ಸಭೆಯಲಿ ತವಕದಿಂದಲಿ ಬಂದುಕುಳಿತು || 29 || ತಲೆ ಎತ್ತಿ ನೋಡಲಿಲ್ಲವೊ ಆತನ ಕೂಡ ಗೆಲುವಿಂದ ಮಾತಾಡಲಿಲ್ಲ ಎಲೆ ಕಾಮದೇವ ಎನ್ನನುಜೆಯ ಕಳಿಸೆಂದು ಜುಲಿಮಿಂದ ತಾನೇ ಕೇಳಿದನು || 30 || ಹುವ್ವಿನ ಮಂಚ ಪಂಚಭಕ್ಷಪರಮಾನ್ನವು ದಾವಾಗ ನಮ್ಮನಿಯಲ್ಲಿ। ಉಣ್ಣಲಾರಳು ಜೋಳದನ್ನವ ನಮ್ಮಾಕೆ ನಾವೀಗ ಕಳುಸುವೊರಲ್ಲ || 31 || ಲಕ್ಷ್ಮೀದೇವಿ ಭಾರತಿದೇವಿ ಗೌರಿಯರು ತೌರುಮನಿಯ ಹಾರೈಸುವರು । ನಮ್ಮ ಮನೆಯಲ್ಲಿದ್ದ ಅಂಬಂಲಿಯನ್ನೇ ಉಂಡುಸಂಭ್ರಮದಿಂದ ಬಾಹೋಳೆಂದ || 32 || ಸಿರಿಮುಡಿಯಮೇಲೆ ಹುಲ್ಲು ಹೊರಿಸೂವೇನು ಕರುವುಕಾಯಿಸಿ ನಮ್ಮ ಮನೆಯ ಅರುವೆವುಡಿಸಿ ಮೂರುಬೊಗಸಿ ಅಂಬಲಿಯನ್ನು ಮರೆಯಾದೆ ಹೊಯ್ಯುವೆನೆಂದ || 33 || ಈಗಲೆ ಆಡುವುದೇಕೆ ಇಷ್ಟೊ ಮಾತು ಜೋಳವಕೊಂಡು ಹೋಗೆನಲು । ಬೇಡಲೆವೊಕಾಮ ನಿನ್ನ ಐಶ್ವರ್ಯವ ಹಾಳುಮಾಡುವೆನೊಂದುಘಳಿಗೆಯಲಿ ||34 || ಸಾಮರ್ಥ ನೀಹೌದೊ ಸಲಹುವ ಜೋಳವ ಗಮಕದಿಂದಲಿ ಬೆಳೆವೆನೆಂದು। ಅಮೃತದ ಕಲಶವ ತಂಗಿ ಕೈಯೊಳಗಿಟ್ಟು ಚಮತ್ಕಾರದಿಂದ ಮಾಯವಾದ || 35|| ಹೊಟ್ಟೆ ಹಸಿದಿತು· ಭೋಜನಮಾಡೇನೆಂದರೆ ಅಟ್ಟ ಅಡಿಗೆ ಮನೆಯೊಳಿಲ್ಲ । ಕಟ್ಟಿದ್ದ ಕಣಜಗಳೆಲ್ಲ ಬರಿದಾಯಿತು ಬಿಟ್ಟುಹೋಯಿತು ಮಾರ್ಬಲವು || 36 || ಸಣ್ಣ ಶಾಲ್ಯಕ್ಕಿ ಬೇಳೆಬೆಲ್ಲವು ಎಲ್ಲಾ ಮಣ್ಣುಗೂಡಿದ ಆ ಕ್ಷಣದಿ । ಎಣ್ಣೆ ತುಪ್ಪದ ಕೊಡ ಮಣ್ಣಾಗೆ ಉರುಳಿದವು ಇನ್ನೇನೆನುತ ಚಿಂತಿಸಿದ || 37 || ಉಟ್ಟದುಕೂಲ ವಸ್ತ್ರಂಗಳೆಲ್ಲವು ಪುಡಿಪುಡಿಯಾಗಿ ಹರಿದವು। ಎಡಗೈಯಿಂದಲಿ ಮಡದಿಯ ಕರಕೊಂಡು ನಡೆದನು ಪರದೇಶಿಯಂತೆ || 38 || ಮಂದಗಮನೆ ಮೆಲ್ಲಡಿಯ ನಿಡುವೊಳಂದು ಕಂದಿತುವರನಗಿಮುಖವು । ಕಂದರ್ಪ ಬಾಹಮಾರ್ಗದಲೆ ಶಂಕರಗಂಡ ಒಂದು ಹೊಲವ ನಿರ್ಮಿಸಿದ ||39 || ಪಲ್ಲರಿಸಿದ ವೈರನೆ ಕಂಡು

ಮನ್ಮಥ ಮೆಲ್ಲನೆ ಕೈಯ ದುಡಿಕಿದನು । ನಿಲ್ಲೆಲೋ ನಮ್ಮೊಲ ಹೋಗದಿರೋ ಎನುತ ಅಲ್ಲಿಂದ ಗದ್ರಿಸಿ ಬೈದ ॥ 40 ॥ ತಪ್ಪದೆ ಕವಣೆಯ ಕಲ್ಲಿಟ್ಟು ಮದನಗೆ ನಿಮ್ಮಪ್ಪನ ಹೊಲವೇನೋ ಎನುತ । ದರ್ಪದಿಂದಲಿ ಶಂಕರಗಂಡ ನಿಗ್ರಹಿಸೆ ಸೊಪ್ಪೆಯ ಮರೆಯಲ್ಲಡಗಿದನು ॥ 41 ॥ ಮೊಸರು ಯಾಲಕ್ಕಿ ಶುಂಠಿಯನಿಕ್ಕಿ ಬುತ್ತಿಯ ಹಸನಾಗಿ ಕಟ್ಟಿ ನಾರಿಯರು । ಹೊಸ ಗಿಂಡಿಯನೆ ತುಂಬಿ ಬರುತಿರೆ ಪರಿಮಳ ಎಸೆವೊದುಕಂಡ ಅಂಗಜನು ॥ 42 ॥ ತರಳೆ ! ರನ್ನಳೆ !! ಪೋಗಿ ತವಕದಿ ಬುತ್ತಿಯ ತಿರಿದು ತಾ ಎನುತ ಪೇಳಿದನು । ಥರವೇನನಗೆ ಚಿಕ್ಕಪ್ರಾಯ ಲಜ್ಜೆತೊರೆದು ತಿರಿದುತಾಎನುತ ಹೇಳುವುದು ॥ 43 ॥ ರಮಣನಾಡಿದ ಮಾತುಮೀರಲಾಗದು ಎಂದು ಅವರುಂಬೊಸಮಯಕ್ಕೆ ಹೋಗಿ ನನಗಿಷ್ಟು ಬುತ್ತಿಯ ಕೊಡುತಾಯೆ ಎನುತಲಿ ಕಮಲಾಕ್ಷಿ ಕೇಳಿದಳವರ ॥44 ॥ ಉಂಬೋಸಮಯಕ್ಕೆ ಬಂದೀರೆಂದು ಕೊಟ್ಟಾರವರು ್ನಿಂಬೆಹೋಳು ಬುತ್ತಿಯನ್ನು ಶಂಖರಾರಿಗೆ ಅದು ಸವಿದುಂಡು ಸಾಲದು ಹಂಬಲಿಸುತ್ತ ಬರುತಿಹನು ॥ 45 ॥ ಬಾರಲೋ ಎಂದು ಕರಿಸಿತಾ ಹೊಯ್ಸಿದ ಆಗ ಅಂಬಲಿ ಮೂರು ಭೊಗಸಿ । ದಾರಮಗನೊ ನಿನ್ನ ಹೆಸರೇನೆನುತ ವಿಚಾರಿಸಿದನು ಶಂಕರನು ॥ 46 ॥ ನೆರೆಹೊರೆಯವರು ಮನ್ಮಥನೆಂದು ಕರೆವೊರು ಪರದೇಶಿ ತಾನೆಂದು ನುಡಿದ । ಕರುಗಳ ಕಾಯಿಮೂರು ಬೊಗಸೆ ಅಂಬಲಿಯನ್ನು ಮರೆಯದೆ ಹೊಯ್ಸುವೆನೆಂದ ॥ 47 ॥ ತಂದೆ ನೀನಿಟ್ಟ ಊಳಿಗದೊಳಗಿಪ್ಪೆನು ಹಾಕೆಂದು ಕೈಮುಗಿದ ಮನ್ಮಥನು । ಕಂದರ್ಪನಾಗರ್ವ.ಅಡಗಿತು ಕರುಗಳ ಹಿಂಡುಕಾಯಲು ಒಪ್ಪಿದನು ॥ 48 ॥ ನಾಲ್ಕುವಾರ ಕರುಗಳ ಹಿಂಡನೆಕಾಯ್ದು ಜೋಕಿಯಿಂದಲಿ ತಂದೊಪ್ಪಿಸಿದ । ಏಕೆಲೋ ಕರುಗಳು ಬಡವಾದವೆನುತಲಿ ಧಿಕ್ಕರಿಸಿದನು ಶಂಕರನು ॥ 49 ॥ ಕಡಿಮೆ ಮಾಡಿದ ಒಂದು ಬೊಗಸೆ ಅಂಬಲಿಯನ್ನು ಒಡಲಿಗೆ ಸಾಲದಂಗಜಗೆ । ಎರಡೂಕೈಯಿಂದಲು ಕೊಯ್ದನುಹುಲ್ಲನು ಯನ್ನೊಡೆಯಮೆಚ್ಚುವನೆನುತ ॥ 50 ॥ ಬೆರಳು ಒಡೆದು ರಕ್ತಧಾರೆ ಸುರಿಯೆ ಹುಲ್ಲು ಹೊರೆಯಾತ ಹೊತ್ತ ಮಸ್ತಕದಿ । ಕರುಗಳ ಹಿಂಡು ಮುಂದೊತ್ತಿ

ಮನ್ಮಥರಾಯ ಬರವೊದು ಕಂಡು ಭಾಮಿನಿಯು ॥ 51 ॥ ತನ್ನ ವಲ್ಲಭನ ಶ್ರಮ ಕಂಡು ರತಿದೇವಿ ಕಣ್ಣಲ್ಲಿ ಉದಕವ ತುಂಬಿ । ಇನ್ನಾದರು ಬಿಡಿಸೆನುತ ಅಣ್ಣಗೆ ಬೇಡಿಕೊಂಡು ಬಿನ್ನೈಸಿದಳಾಕೆ ॥ 52 ॥ ಅಂಗಜನಾ ಮೃದು ಪಾಣಿಮಧ್ಯದಿ ಭಾಳ ಘಾಯವಕಂಡು ಶಂಕರನ । ಹೋಯಿತುಮನದ ಕೋಪವು ಅಂತಃಕರಣವು ಆಯಿತು ಪಂಚಾಬಾಣನಲಿ ॥ 53 ॥ ಕಬ್ಬುಬಿಲ್ಲಿನ ಕೃಪೆಯಿಂದ ಶಂಕರಗಂಡ ಅಭ್ಯಂಗವನೆ ಮಾಡಿಸಿದ। ಶುಭ್ರ ವಸ್ತ್ರವ ಉಡಿಸಿ ಪಂಚಬಾಣನ ನಿರ್ಭಂದವನೆ ಬಿಡಿಸಿದನು ॥ 54 ॥ ತಡವಮಾಡದೆ ಜೋಡು ಸಮೆಗಳನೇ ಹಚ್ಚಿ ಯಡೆಮಾಡಿ ಅರಮನೆಯೊಳಗೆ । ಒಡನೆ ಪಾಯಸ ಪಂಚಭಕ್ಷಭೋನವಿಕ್ಕಿ ಪಿಡಿದಿದ್ದ ವೀಳ್ಯ ಮೈದುನಗೆ ॥ 55 ॥ ಬಾಮಮೈದುನತನದಲ್ಲೆ ನೋಡಿದರು ವಿರೋಧವಿಲ್ಲವೆಂದೆನುತ । ಕಾಮದೇವಗೆ ಉಡುಗೋರೆ ವೀಳ್ಯವನಿತ್ತು ಮನ್ನಿಸಿದ ಶಂಕರನು ಪ್ರೇಮದಲಿ ॥ 56 ॥ ಉತ್ತಮ ವಸ್ತ್ರವ ತಂಗಿಗುಡಿಸಿ ಹೊಸ ಮುತ್ತನೆ ಸೋಗಿಲು ತುಂಬಿ। ಚಿತ್ತಜ ಸಹಿತವಾಗಿ ವಜ್ರದಂದಣವೇರಿ ರತಿದೇವಿತಾ ಹರುಷದಲಿ ॥ 57 ॥ ಪುಷ್ಪಶರನು ತನ್ನ ಪುರಕಾಗಿ ಬರುತಿರೆ ಎದುರಿಗೆ ಬಂದು ಮಾರ್ಬಲವು। ಮೊದಲಿನಂದದಲೆ ಐಶ್ವರ್ಯ ಹೆಗ್ಗಳಿಸುತ ಸದನದಲ್ಲಿದ್ದ ಮನ್ಮಥನು ॥ 58 ॥ ಬರಡಾಕಳೀಯಲಿ, ಬಂಜೆಗೆ ಮಕ್ಕಳಾಗಲಿ, ಕುರುಡಗೆ ಕಂಗಳು ಬರಲಿ । ಋಣಹರಿಯಲಿ ದಾರಿದ್ರ್ಯವು ಹಿಂಗಲಿ ಹರಿಯಮ್ಮ ಹೃದಯದೊಳಿರಲಿ ॥ 59 ॥ ಶಂಕರಗಂಡನ ಕಥೆಯನ್ನು ಪೇಳಿದೆ ಪನ್ನಂಗ ತಲ್ಪನದ ಯದಿ । ನಿರ್ಮಲಮೂರ್ತಿ ''ಹೆಳವನ ಕಟ್ಟೆ ರಂಗಯ್ಯ'' ಯನ್ನನ್ನು ಸಲಹುವ ದಯದಿ ॥ 60 ॥

ಇತಿ

ಶ್ರೀಮತಿ ಹೆಳವನಕಟ್ಟೆ ರಂಗವ್ವನವರಿಂದ ವಿರಚಿತವಾದ
ಶಂಕರಗಂಡನ ಹಾಡು ಮುಗಿದುದು.